## ಪಾಠ-೨

## ನನ್ನ ಕನಸು

ನೀತಿ : ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ.

### ಪದಗಳ ಅರ್ಥ

೧) ಚಿತ್ತಾರ - ಚಿತ್ರ
೨) ನಿನಾದ - ಧ್ವನಿ
೩) ನಿಮಿರು - ನೆಟ್ಟಗೆ ನಿಲ್ಲು
೪) ಕಲರವ - ಪಕ್ಷಿಗಳ ಕೂಗು
೫) ಸಂರಕ್ಷಿಸು - ಕಾಪಾಡು
೬) ಮೂದಲಿಸು - ಹಂಗಿಸು

ಅ. ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸು.

೧) ಕಾಡಿಗೆ ಮರ ಕಡಿಯಲು ಬಂದವರು ಯಾರು ?
ಉ : ಕಾಡಿಗೆ ಮರ ಕಡಿಯಲು ಬಂದವರು ಮಾನವ

---

೨) ಮಾನವ ಯಾರನ್ನು ಅಂಜುಬುರುಕ ಪ್ರಾಣಿ ಎಂದು ಹೇಳಿದನು ?
ಉ : ಮಾನವ ಮೊಲವನ್ನು ಅಂಜುಬುರುಕ ಪ್ರಾಣಿ ಎಂದು ಹೇಳಿದನು.

---

೩) ಕೋತಿ ಮಾನವನನ್ನು ಏನೆಂದು ಪ್ರಶ್ನಿಸಿತು ?
ಉ : ಕೋತಿ ಮಾನವನನ್ನು ನೀವು ಸುಂದರವೋ ಅಥವಾ ನಾವು ಸುಂದರವೋ ಎಂದು ಪ್ರಶ್ನಿಸಿತು.

---

ಆ. ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿರಿ

೧) ಮೊಲವು ಮಾನವನನ್ನು ಅವಿವೇಕಿ ಎಂದು ಹೇಳಿದ್ದು ಏಕೆ ?
ಉ : ಕಾಡಿನ ನಾಶದಿಂದ ಪರಿಸರ ಅಸಮತೋಲನ ಉಂಟಾಗಿದೆ ಆದರೂ ಮಾನವ ಮರ ಕಡಿಯುತ್ತಿರುವದರಿಂದ ಮೊಲ ಮಾನವನನ್ನು ಅವಿವೇಕಿ ಎಂದು ಹೇಳಿತು

೨) ರಾಜು ಕಂಡ ಕನಸೇನು ?
ಉ : ಕಾಡಿನಲ್ಲಿ ಪ್ರಾಣಿಗಳೆಲ್ಲ ಸೇರಿ ಮರ ಕಡಿಯಲು ಹೋದ ಮನುಷ್ಯನ ಮನ ಪರಿವರ್ತನೆ ಮಾಡಿದ ಕನಸು ಕಂಡನು.

ಇ. ಈ ವಾಕ್ಯಗಳನ್ನು ಯಾರು-ಯಾರಿಗೆ ಹೇಳಿದರು ತಿಳಿಸಿ.

೧) "ಸಾಲು ಮರದ ತಿಮ್ಮಕ್ಕ ನನ್ನು ನೋಡಿ ಕಲಿ"
ಉ : ಯಾರು ಹೇಳಿದರು? ಮರವು ಹೇಳಿತು.
ಯಾರಿಗೆ ಹೇಳಿದರು? ಮಾನವನಿಗೆ ಹೇಳಿತು.

೨) "ನಾವು ಪ್ರಾಣಿಗಳಿಂದ ಕಲಿಯೋದು ಬಹಳಷ್ಟಿದೆ"
ಉ : ಯಾರು ಹೇಳಿದರು? ರಾಜುನ ಅಮ್ಮ ಹೇಳಿದರು.
ಯಾರಿಗೆ ಹೇಳಿದರು? ರಾಜುವಿಗೆ ಹೇಳಿದರು

ಈ. 'ಅ' ಪಟ್ಟಿಯಲ್ಲಿನ ಪ್ರಾಣಿ ಪಕ್ಷಿಗಳನ್ನು 'ಬ' ಪಟ್ಟಿಯಲ್ಲಿನ ಅವುಗಳ ವಿಶೇಷತೆಗಳ ಜೊತೆ ಹೊಂದಿಸಿ ಬರೆ.

| ಅ. | | ಆ |
|---|---|---|
| ೧) ಕೋಗಿಲೆ | - | ಇಂಪಾದ ಧ್ವನಿ |
| ೨) ಜಿಂಕೆ. | - | ಸುಂದರವಾದ ಕಣ್ಣು |
| ೩) ನವಿಲು. | - | ಆಕರ್ಷಕ ನಡಿಗೆ |

ಉ. ವಿರುದ್ದಾರ್ಥಕ ಪದ ಬರೆ.

೧) ಅಂಜುಬುರುಕ. ×. ದೈರ್ಯವಂತ

೨) ಮೊದಲು ×. ಕೊನೆ.

೩) ಅಳಿವು. ×. ಉಳಿವು.

೪) ಅತಿವೃಷ್ಟಿ x ಅನಾವೃಷ್ಟಿ

ಉಕ್ತಲೇಖನ

1) ಕಾಡು
2) ಮಾನವ
3) ಪ್ರಾಣಿ
4) ಮುಂಜಾನೆ
5) ದ್ವನಿ
6) ಮೊಲ
7) ಪಕ್ಷಿ
8) ಆಶ್ರಯ
9) ಅತಿವೃಷ್ಟಿ
10) ಸೌಂದರ್ಯ